ನಿರ್ವಹಿಸುತ್ತಿರುವ ಕಾರಣದಿಂದಾಗಿ ಜನರು ತುಂಬಾ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದನ್ನು ಗಮನಿಸಿ ಕೂಡಲೇ ಖಾಯಂ ಕಾರ್ಯದರ್ಶಿಗಳ ನೇಮಕಕ್ಕೆ ಸರ್ಕಾರ ಕ್ರಮ ಜರುಗಿಸುವುದೇ,

ಇ) ಪ್ರತಿಯೊಂದು ಗ್ರಾಮ ಪಂಚಾಯತ್‌ಗೆ ಒಬ್ಬ ಗ್ರಾಮ ಕರಣೀಕರವರನ್ನು ನೇಮಕ ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಶ್ರೀ ಸಿ ಎಂ ಉದಾಸಿ

ಅ) ಒಟ್ಟು 3 ಹುದ್ದೆಗಳು ಖಾಲಿ ಇರುತ್ತವೆ

ಖಾಲಿ ಹುದ್ದೆಗಳಿಗೆ ಪ್ರಭಾರಿ ವ್ಯವಸ್ಥೆ ಮಾಡಲಾಗಿದೆ

ಆ) ಪ್ರಸ್ತುತ ಖಾಲಿ ಇರುವ 3 ಹುದ್ದೆಗಳಿಗೆ ಈಗ ಪ್ರಭಾರಿ ವ್ಯವಸ್ಥೆ ಮಾಡಲಾಗಿದ್ದು, ಈ ಹುದ್ದೆಗಳನ್ನು ನಿಯಮಾನುಸಾರ ಶೀಘ್ರವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ

ಇ) ಇಲ್ಲಾ

ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)128(325)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಪ್ರೌಢ ಶಾಲೆಗಳಲ್ಲಿ ಅಕ್ಷರ ದಾಸೋಹ ವಿಸ್ತರಣೆ ಕುರಿತು ವಿವರಗಳೇನು?

ಆ) ಈ ಯೋಜನೆಯ ಜಾರಿಯ ವ್ಯವಸ್ಥೆಯನ್ನು ಯಾವ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ

ಇ) ಅಕ್ಷರ ದಾಸೋಹ ವ್ಯವಸ್ಥೆಯನ್ನು ಸ್ವತಂತ್ರ ನಿರ್ವಹಣೆಗೆ ಒಳಪಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ, ಇದ್ದಲ್ಲಿ, ಆ ಕುರಿತು ವಿವರಗಳೇನು?

ಶ್ರೀ ಎಸ್ ಬಸವರಾಜ ಹೊರಟ್ಟಿ

ಅ) 2007–08ನೇ ಸಾಲಿನಲ್ಲಿ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ 8ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಹಾಗೂ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿನ 8ರಿಂದ 10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಸರ್ಕಾರಿ ಆದೇಶದ ಸಂಖ್ಯೆ ಇಡಿ 27 ಎಂಎಂಎಸ್ 2007 ದಿನಾಂಕ, 19–05–2007 ರಂತೆ ಅಕ್ಷರ ದಾಸೋಹ ಕಾರ್ಯಕ್ರಮವನ್ನು ವಿಸ್ತರಿಸಲಾಗಿದೆ

ಕಾರ್ಯಕ್ರಮದಡಿ ಮಧ್ಯಾಹ್ನ ಉಪಹಾರ ನೀಡಲು ಪ್ರತಿ ವಿದಾರ್ದಿಗೆ ಪ್ರತಿ ದಿನಕ್ಕೆ ರೂ 3 49ಗಳನ್ನು ಖರ್ಚು ಮಾಡಲಾಗುತ್ತಿದೆ

ಪ್ರತಿ ದಿನಕ್ಕೆ ಪ್ರತಿ ವಿದಾರ್ಥಿಗೆ ಈ ಕೆಳಕಂಡಂತೆ ಆಹಾರ ಧಾನ್ಯ ನೀಡಲಾಗುತ್ತದೆ

ಅಕ್ಕಿ	150ಗ್ರಾಂ
ಬೇಳೆ	25ಗ್ರಾಂ
ಎಣ್ಣೆ	06ಗ್ರಾಂ
ಉಪ್ಪು	04ಗ್ರಾಂ
ತರಕಾರಿ	70ಗ್ರಾಂ

300ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ ಪ್ರತ್ಯೇಕ ಅಡುಗೆ ಕೇಂದ್ರ ಪ್ರಾರಂಭಿಸುವ ಬದಲಿಗೆ ಹತ್ತಿರದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಂಯೋಜಿಸಿ ಒಂದು ಹೆಚ್ಚುವರಿ ಅಡುಗೆ ಸಿಬ್ಬಂದಿಯನ್ನು ಒದಗಿಸಲಾಗಿದೆ

ಹಾಗೂ 500/– ರೂ ಗಳನ್ನು ಸಿದ್ದಪಡಿಸಿದ ಆಹಾರವನ್ನು ಸಾಗಿಸಲು ಸಾಗಾಣಿಕಾ ವೆಚ್ಚವನ್ನು ನಿಗದಿಪಡಿಸಲಾಗಿದೆ

300ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರತ್ಯೇಕವಾದ ಅಡುಗೆ ಕೇಂದ್ರ ಪ್ರಾರಂಭಿಸಲಾಗಿದೆ ವಿವರ ಕೆಳಗಿನಂತಿದೆ

ವಿದ್ಯಾರ್ಥಿಗಳ ಸಂಖ್ಯೆ	ಪಾತ್ರೆ ಪರಿಕರ ಖರೀದಿಗಾಗಿ	ಅಡುಗೆ ಸಿಬ್ಬಂದಿ ಸಂಖ್ಯೆ
301–500	ರೂ 7500–00	4
501–1000	ರೂ 8500–00	5
1001–ಹೆಚ್ಚು	ರೂ 10000–00	6

ಆ) ಸರ್ಕಾರಿ ಪ್ರೌಢಶಾಲೆಗಳಲ್ಲಿ ಅಡುಗೆ ಸಿಬ್ಬಂದಿಯನ್ನು ನೇಮಕ ಮಾಡಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಅನುದಾನಿತ ಶಾಲೆಗಳಲ್ಲಿ ಆಡಳಿತ ಮಂಡಳಿಯವರು ಅಡುಗೆ ಸಿಬ್ಬಂದಿಯನ್ನು ನೇಮಿಸಿಕೊಂಡು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುತ್ತಾರೆ

ಸ್ತ್ರೀ ಶಕ್ತಿ ಸಂಘಗಳು ಮುಂದೆ ಬಂದಲ್ಲಿ ಅಂತಹ ಸಂಘಗಳಿಗೆ ಈ ಯೋಜನೆಯನ್ನು ನೀಡಲಾಗುತ್ತಿದೆ

ಖಾಸಗಿ ಸಂಸ್ಥೆಗಳು ಮುಂದೆ ಬಂದಲ್ಲಿ ಈ ಯೋಜನೆಯನ್ನು ಅವರಿಗೆ ವಹಿಸಲಾಗುತ್ತದೆ, ಸಂಸ್ಥೆಗಳ ವಿವರಗಳು ಹಾಗೂ ವಹಿಸಿ ಕೊಂಡಿರುವ ಪ್ರೌಢಶಾಲೆಗಳ ಸಂಖ್ಯೆಗಳ ಸಂಖ್ಯೆಯನ್ನು ಅನುಬಂಧ–ಅ ನಲ್ಲಿ ಒದಗಿಸಲಾಗಿದೆ

ಇ) ರಾಜ್ಯ ಸರ್ಕಾರದ ನೀತಿಯಂತೆ ಆಸಕ್ತಿ ವಹಿಸಿ ಮುಂದೆ ಬರುವಂತಹ ಸ್ವಯಂ ಸೇವಾ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ

ಅನುಬಂಧ–ಅ

ಕ್ರ.ಸಂ	ಜಿಲ್ಲೆಯ ಹೆಸರು	ಸಂಘ ಸಂಸ್ಥೆಯ ಹೆಸರು	ಸಂಸ್ಥೆಗಳಿಗೆ ವಹಿಸಿರುವ ಪ್ರೌಢಶಾಲೆಗಳ ಸಂಖ್ಯೆ
1	ಬೆಂಗಳೂರು ನಗರ	ಅಕ್ಷಯ ಪಾತ್ರೆ	127
2		ಅದಮ್ಯ ಚೇತನ	124
3		ಅಖಿಲ ಕರ್ನಾಟಕ ಕಸ್ತೂರಿ ಕಲಾ ಸಂಘ	33
4		ಮೊಹಿಸಿನ್ ಷರೀಫ್ ಚಾರಿಟಬಲ್ ಟ್ರಸ್ಟ್	23
5		ಸಮರ್ಧನಂ ಟ್ರಸ್ಟ್	20
6		ಆಶಾಕಿರಣ ಚಾರಿಟಬಲ್ ಟ್ರಸ್ಟ್	10
7		ಕರುಣಾ ಸೇವಾ ಸಮಿತಿ ಟ್ರಸ್ಟ್	3
8		ಸಾಯಿ ಮಂಡಳಿ	3
9		ಅನ್ನಪೂರ್ಣ ಟ್ರಸ್ಟ್	2
10		ಸಮಗ್ರ ಜನಾಭಿವೃದ್ಧಿ ಸಂಸ್ಥೆ	14
11		ಗಿಲ್ ಗಾಲ್ ಚಾರಿಟಬಲ್ ಟ್ರಸ್ಟ್	2
12		ಎಸ್ ಎನ್ ಚಾರಿಟಬಲ್ ಟ್ರಸ್ಟ್	32
13		ತಾಜ್ ಚಾರಿಟಬಲ್ ಟ್ರಸ್ಟ್	5
14		ಓಂ ಶಕ್ತಿ ದೇವಸ್ಥಾನ ಸಮಿತಿ	13
15		ಸತ್ಯಸಾಯಿ ಸುಬ್ಬರಾಮಶಾಸ್ತ್ರಿ ಮೆಮೊರಿಯಲ್ ಟ್ರಸ್ಟ್	1
16		ಪ್ರಿಯಾ ಚಾರಿಟಬಲ್ ಟ್ರಸ್ಟ್	6
17	ಬೆಂಗಳೂರು ಗ್ರಾಮಾಂತರ	ಅಕ್ಷಯ ಪಾತ್ರೆ	4
18	ಬೆಳಗಾಂ	ಸಮೃದ್ಧಿ ಸೇವಾ ಸಂಸ್ಥೆ	12
19	ಚಾಮರಾಜನಗರ	ಜೆ ಎಸ್ ಎಸ್ ಸಂಸ್ಥೆ	9
20	ಚಿತ್ರದುರ್ಗ	ಒಪ್ಪತ್ತಿನ ಮರ, ಹೊಸದುರ್ಗ	59
21	ದಕ್ಷಿಣ ಕನ್ನಡ	ಇಸ್ಕಾನ್	9
22	ಧಾರವಾಡ	ಇಸ್ಕಾನ್	96
23		ಅದಮ್ಯ ಚೇತನ	83
24	ಹಾಸನ	ಸಂಗಮೇಶ್ವರ ಸ್ವಾಮಿ ಜವೇನಹಳ್ಳಿ ಮರ, ಹಾಸನ	14
25		ಜಯದೇವ ಸ್ವಾಮಿಗಳು ಸುಕ್ಷೇತ್ರ	3
26		ಕಾಲಾದ್ರಿ ರುದ್ರಮುನೀಶ್ವರ ಟ್ರಸ್ಟ್	3
27	ಕೋಲಾರ	ಗಣಪತಿ ವಿದ್ಯಾ ಸಂಸ್ಥೆ	20
28		ತಾಜ್ ಚಾರಿಟಬಲ್ ಟ್ರಸ್ಟ್	29
29		ಅನ್ನಪೂರ್ಣೇಶ್ವರಿ ಕ್ಷೇಮಾಭಿವೃದ್ಧಿ ಸಂಘ	22
30		ನಾರಾಯಣ ಶೆಟ್ಟಿ ಮೆಮೊರಿಯಲ್ ಟ್ರಸ್ಟ್	23

31		ಮಾರುತಿ ಗ್ರಾಮೀಣ ವಿದ್ಯಾ ಕೇಂದ್ರ	27
32		ಯೂನಿಟಿ ವಿದ್ಯಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ	7
33		ಆದರ್ಶ ಮಹಿಳಾ ಒಕ್ಕೂಟ	1
34	ಮೈಸೂರು	ಇಸ್ಕಾನ್	1
35	ಬಾಗಲಕೋಟೆ	ಜಮಖಂಡಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ	3
36		ಪೂರ್ಣಿಮಾ ಗ್ರಾಮೀಣಾಭಿವೃದ್ಧಿ ಸಂಸ್ಥೆ	7
37	ಬಳ್ಳಾರಿ	ಇಸ್ಕಾನ್	17
	ಒಟ್ಟು		**867**

ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)130(327)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬೆಳ್ತಂಗಡಿ ತಾಲ್ಲೂಕು ಪ್ರದೇಶದ ಎಷ್ಟು ಪ್ರೌಢ ಶಾಲೆಗಳಿಗೆ ಇನ್ನೂ ಖಾಯಂ ಮುಖ್ಯೋಪಾಧ್ಯಾಯರನ್ನು ನೇಮಕಗೊಳಿಸಲಾಗಿಲ್ಲ

ಆ) ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರೌಢ ಶಾಲೆಗಳಲ್ಲಿ ಬೋಧಕ ವರ್ಗ ಮತ್ತು ಮುಖ್ಯೋಪಾಧ್ಯಾಯರುಗಳ ನೇಮಕಾತಿಯು ಅತ್ಯಾವಶ್ಯಕ ವಾಗಿದ್ದು, ಆ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್ ಬಸವರಾಜ ಹೊರಟ್ಟಿ

ಅ) ಬೆಳ್ತಂಗಡಿ ತಾಲ್ಲೂಕಿನ 17 ಪ್ರೌಢ ಶಾಲೆಗಳಿಗೆ ಖಾಯಂ ಮುಖ್ಯೋಪಾಧ್ಯಾಯರನ್ನು ನೇಮಕಗೊಳಿಸಲಾಗಿಲ್ಲ

ಆ) 2006-07 ನೇ ಸಾಲಿನಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇದ್ದ 5984 ಸಹ ಶಿಕ್ಷಕರ ಗ್ರೇಡ್-2 ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್-1 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 181 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಆಯ್ಕೆಯಾದ ಅಭ್ಯರ್ಥಿಗಳಿಗೆ